ಸಿ.ಸಿ .ನಂ. 194/2022 ಪಿಡಬ್ಲೂಃ 1

ದಿನಾಂಕಃ 17-11-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ನನ್ನ ಪ್ರಕಾರ ಈ ಕೇಸಿನಲ್ಲಿ ಸಾಲಕ್ಕಾಗಿ ಯಾವ ದಿನಾಂಕದಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ . ಸಾಲ ಕೊಟ್ಟಿದ್ದೆವು ಎಂದು ಹೇಳಿದ ಸಂದರ್ಭದಲ್ಲಿ ನಮ್ಮ ಶಾಖೆಗೆ ಯಾರು ವ್ಯವಸ್ಥಾಪಕರಾಗಿದ್ದರು ಎಂದು ನನಗೆ ಗೊತ್ತಿಲ್ಲ. ಒಂದು ಸಾಲಕ್ಕಾಗಿ ಅರ್ಜಿ ಬಂದಾಗ ಅದನ್ನು ನಮ್ಮ ಸಂಸ್ಥೆಯ ಆಡಳಿತ ಮಂಡಳಿಯ ಸಭೆಯಲ್ಲಿ ಇಡಲಾಗುತ್ತದೆ ಎಂದರೆ ಸರಿ . ಆಡಳಿತ ಮಂಡಳಿಯ ಸಭೆ ತಿಂಗಳಿಗೆ ಒಂದು ಬಾರಿ ನಡೆಯುತ್ತದೆ . ಈ ಸಾಲದ ಅರ್ಜಿ ಬಂದಿತ್ತು ಎಂದು ಹೇಳಿದ ಎಷ್ಟು ದಿವಸಗಳ ನಂತರ ಆಡಳಿತ ಮಂಡಳಿಯ ಸಭೆ ನಡೆಯಿತು ಎಂದು ನನಗೆ ಗೊತ್ತಿಲ್ಲ . ಆಡಳಿತ ಮಂಡಳಿಯಲ್ಲಿ ಈ ಸಾಲ ಮಂಜೂರಾಗಿತ್ತೋ ಇಲ್ಲ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ಠರಾವು ದಿಃ 01-08-2019 ರಲ್ಲಿ ಆಗಿರುತ್ತದೆ . ನಮ್ಮ ಸಂಸ್ಥೆಯಲ್ಲಿ ಸಾಲದ ಅರ್ಜಿ ಬರುವ ಪೂರ್ವದಲ್ಲಿ ಸದರಿ ಸಾಲ ಮಂಜೂರಾತಿಯ ಬಗ್ಗೆ ಠರಾವು ಮಾಡುವ ಪದ್ಧತಿ ಇಲ್ಲ . ಮೇಲೆ ಹೇಳಿದ ಠರಾವಿನ ಪ್ರತಿಯನ್ನು ಈ ಕೇಸಿನಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ . ಸದರಿ ಠರಾವಿನ ಪ್ರತಿಯನ್ನು ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ಸದರಿ ಠರಾವಿನಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರ ಸಹಿಗಳು ಇರುತ್ತವೆ ಎಂದರೆ ಸರಿ .

4. ಈ ಪ್ರಕರಣದಲ್ಲಿ ಮೂರು ಜನ ಜಾಮೀನುದಾರರು ಇದ್ದಾರೆ . ಮೊದಲನೇ ಜಾಮೀನುದಾರರ ಹೆಸರು ನೀಲಾಧರ ಚೆನ್ನಪ್ಪ ಹರಿಕಂತ್ರ ಆಗಿರುತ್ತಾರೆ . ಸದರಿ ನೀಲಾಧರ ಹರಿಕಂತ್ರರವರ ವಿಳಾಸ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಜಾಮೀನುದಾರರ ಹೆಸರು ಸಂಗೀತಾ ಹಾಗೂ ರಾಜಾರಾಮ ಶಿವಾ ಭಟ್ ಆಗಿರುತ್ತಾರೆ . ಸಾಲಗಾರರನ್ನು ಹಾಗೂ ಜಾಮೀನುದಾರರನ್ನು ನಾನು ಭೇಟಿ ಮಾಡಿಲ್ಲ ಹಾಗೂ ಅವರನ್ನು

ಗುರುತಿಸಲು ನನಗೆ ಆಗುವುದಿಲ್ಲ ಎಂದರೆ ಸಾಕ್ಷಿಯು ಅವರನ್ನು ನಾನು ಭೇಟಿ ಮಾಡಿಲ್ಲ ಆದರೆ ಅವರನ್ನು ನನಗೆ ಗುರುತಿಸಲು ಆಗುತ್ತದೆ ಎಂದು ನುಡಿಯುತ್ತಾರೆ . ನಾನು ಈ ಕೇಸಿನ ಎಲ್ಲಾ ದಾಖಲೆಗಳನ್ನು ಓದಿ ನೋಡಿರುವುದರಿಂದ ಹಾಗೂ ಸಾಲಗಾರರ ಹಾಗೂ ಜಾಮೀನುದಾರರ ಭಾವ ಚಿತ್ರವನ್ನು ನೋಡಿರುವುದರಿಂದ ಅವರನ್ನು ನನಗೆ ಗುರುತಿಸಲು ಆಗುತ್ತದೆ ಎಂದು ಹೇಳುತ್ತಿದ್ದೇನೆ ಎಂದು . ಸಾಲದ ಅರ್ಜಿಯಲ್ಲಿ ಸಾಲಗಾರರ ಹಾಗೂ ಜಾಮೀನುದಾರರ ಭಾವ ಚಿತ್ರಗಳು ಇರುವುದರಿಂದ ಅದರ ಆಧಾರದ ಮೇರೆಗೆ ನಾನು ಅವರನ್ನು ಗುರುತಿಸುತ್ತೇನೆ ಎಂದು ಹೇಳುತ್ತೇನೆ . ನಾನು ಹೇಳಿದ ಸದರಿ ಸಾಲದ ಅರ್ಜಿಯಲ್ಲಿ ಸಾಲಗಾರರ ಹಾಗೂ ಎಲ್ಲಾ ಜಾಮೀನುದಾರರ ಭಾವಚಿತ್ರಗಳು ಇವೆ . ಆ ರೀತಿ ಸಾಲಗಾರರ ಹಾಗೂ ಎಲ್ಲಾ ಜಾಮೀನುದಾರರ ಭಾವ ಚಿತ್ರ ಇರುವ ಅರ್ಜಿಯ ಆಧಾರದ ಮೇರೆಗೆ ಸಾಲವನ್ನು ಕೊಟ್ಟಿರುತ್ತೇವೆ . ಆ ರೀತಿ ಸಾಲಗಾರರ ಹಾಗೂ ಎಲ್ಲಾ ಜಾಮೀನುದಾರರ ಭಾವ ಚಿತ್ರ ಇರುವ ಅರ್ಜಿಯನ್ನು ಈ ಕೇಸಿನಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ಹಾಜರು ಪಡಿಸಿರುವ ಸಾಲದ ಅರ್ಜಿಯಲ್ಲಿ ಕೇವಲ ಇಬ್ಬರ ಭಾವ ಚಿತ್ರಗಳು ಇವೆ ಎಂದರೆ ಸರಿ . ನಾನು ನೊಡಿದ್ದೆನು ಎಂದು ಹೇಳಿರುವ ಸಾಲಗಾರರ ಹಾಗೂ ಎಲ್ಲಾ ಜಾಮೀನುದಾರರ ಭಾವಚಿತ್ರಗಳು ಇರುವ ಅರ್ಜಿ ನಿಪಿ -8 ಅಲ್ಲ ಎಂದರೆ ಸರಿಯಲ್ಲ. ನಾಲ್ಕು ಜನರ ಭಾವ ಚಿತ್ರಗಳು ಇರುವ ಸಾಲದ ಅರ್ಜಿಯನ್ನು ನಮ್ಮ ಶಾಖೆಯ ಕಂಪ್ಯೂಟರ್ ನಲ್ಲಿ ನೋಡಿರುತ್ತೇನೆ. ಅಂತಹ ಅರ್ಜಿಯನ್ನೇ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಬೇಕಾಗುತ್ತದೆ , ಬೇರೆ ಅರ್ಜಿಯನ್ನಲ್ಲ ಎಂದರೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

5. ನಮ್ಮ ಸಂಸ್ಥೆಯ ಸಾಲದ ಅರ್ಜಿಯ ನಮೂನೆಯಲ್ಲಿ ಇತರ ಠೇವಣಾತಿ ವಿವರ ಎಂಬ ಕಾಲಂ ಇದೆ ಎಂದರೆ ಸರಿ . ಸಾಲದ ಅರ್ಜಿ ನೀಡುವ ಸಂದರ್ಭದಲ್ಲಿ ಸದರಿ ಕಾಲಂನಲ್ಲಿ ಈ ಮೊದಲು ಇರುವಂತಹ ಎಷ್ಟು ಷೇರು ಹಣ ಇದೆ , ಉಳಿತಾಯ ಹಣ ಎಷ್ಟು ಇದೆ ಹಾಗೂ ನಿಶ್ಚಿತ ಠೇವಣಿ ಹಣ ಎಷ್ಟು ಇದೆ ಎಂದು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ. ಈ ಸಾಲವನ್ನು ಕೊಡುವ ಸಂದರ್ಭದಲ್ಲಿ ನಮ್ಮ ಪ್ರಕಾರ

ಸಾಲಗಾರನ 28 ಸಾವಿರ ರೂಪಾಯಿ ಷೇರು ಹಣ ಇತ್ತು. ಈ ಸಾಲವನ್ನು ಕೊಡುವ ಸಂದರ್ಭದಲ್ಲಿ ನಮ್ಮ ಪ್ರಕಾರ ಸಾಲಗಾರನ ಉಳಿತಾಯ ಖಾತೆಯಲ್ಲಿ 1,950/- ರೂಪಾಯಿ ಇತ್ತು. ಈ ಸಾಲವನ್ನು ಕೊಡುವ ಸಂದರ್ಭದಲ್ಲಿ ನಮ್ಮ ಪ್ರಕಾರ ಸಾಲಗಾರನ ನಿಶ್ಚಿತ ಠೇವಣಿ 50 ಸಾವಿರ ರೂಪಾಯಿ ಇತ್ತು. ಮೇಲೆ ಹೇಳಿದ ಷೇರು ಹಣ, ಉಳಿತಾಯ ಖಾತೆಯಲ್ಲಿರುವ ಹಣ ಹಾಗೂ ನಿಶ್ಚಿತ ಠೇವಣಿಯ ಹಣ ಸಾಲ ನೀಡುವ ಎಷ್ಟು ಸಮಯದ ಮೊದಲಿನಿಂದ ಇತ್ತು ಎಂದು ನನಗೆ ಗೊತ್ತಿಲ್ಲ.

6. ಸಾಲದಲ್ಲಿ ಕೋರಿದ ಹಣಕ್ಕಿಂತ ಕಡಿಮೆ ಹಣವನ್ನು ನಮ್ಮ ಆಡಳಿತ ಮಂಡಳಿಯ ಸಭೆಯಲ್ಲಿ ಮಂಜೂರು ಮಾಡುವ ಸಾಧ್ಯತೆ ಇದೆ ಎಂದರೆ ಸರಿ . ಸಾಲ ಎಷ್ಟು ಮಂಜೂರಾಗಿರುತ್ತದೆ ಎಂದು ಆಡಳಿತ ಮಂಡಳಿಯ ಸಭೆಯಲ್ಲಿ ಆಗಿರುವ ಠರಾವನ್ನು ನೋಡಿದರೆ ಮಾತ್ರ ಗೊತ್ತಾಗುತ್ತದೆ ಎಂದರೆ ಸರಿ . ಸಾಲಗಾರರಿಂದ ಯಾವ ಯಾವ ದಾಖಲೆಗಳನ್ನು ಪಡೆದುಕೊಳ್ಳಬೇಕು ಎಂದು ಸದರಿ ಠರಾವಿನಲ್ಲಿ ವ್ಯವಸ್ಥಾಪಕರಿಗೆ ನಿರ್ದೇಶನ ಇರುತ್ತದೆ ಎಂದರೆ ಸಾಕ್ಷಿಯು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ . ಸದರಿ ಠರಾವನ್ನು ನಾನು ಇಲ್ಲಿಯವರೆಗೆ ನೋಡಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.